

ಬಾಲಿವುಡ್ ನಟ ಜಾಕಿ ಶ್ರಾಫ್ ತಮ್ಮ ಮನೆಯಲ್ಲಿ ಗಣೇಶನಿಗೆ ಭಕ್ತಿಯಿಂದ ಪೂಜಿಸುತ್ತಿರುವುದು...

### ಕೇಶವ್‌ಜೀ ನಾಯ್ಕ್ ಚಾಳ್

ಮುಂಬೈಯ ಪ್ರಥಮ ಸಾರ್ವಜನಿಕ ಗಣೇಶೋತ್ಸವವನ್ನು ಗಿರ್‌ಗಾಂವ್‌ನ ಕೇಶವಜೀ ನಾಯ್ಕ ಚಾಳ್‌ನಲ್ಲಿ 1893ರಿಂದ ಆಚರಿಸಿಕೊಂಡು ಬರಲಾಗುತ್ತಿದೆ. 1992ರಲ್ಲಿ ಈ ಮಂಡಲ ತನ್ನ ಶತಮಾನೋತ್ಸವ ಆಚರಿಸಿತ್ತು. 16-9-1901ರಂದು ಇಲ್ಲಿಯ ಆಚರಣೆಗೆ ಬಾಲಗಂಗಾಧರ ತಿಲಕರು ಬಂದಿದ್ದರು. ಈ ಗಣೇಶೋತ್ಸವ ಮಂಡಲ್ ಹಬ್ಬಗಳ ವ್ಯಾಪಾರೀಕರಣದ ವಿರುದ್ಧ ಸದಾ ಧ್ವನಿ ಎತ್ತುತ್ತದೆ. ಹಬ್ಬಗಳನ್ನು ಗ್ಲಾಮರ್‌ನಿಂದ ದೂರ ಇರಿಸಬೇಕೆಂಬುದು ಇವರ ಮನವಿ. ಇಲ್ಲಿಯದ್ದು ಪರಿಸರಸ್ನೇಹಿ ಗಣೇಶ. ಹತ್ತು ದಿನಗಳ ಕಾಲ ಸಾಮಾಜಿಕ ಜಾಗೃತಿಯ ಹಲವು ಕಾರ್ಯಕ್ರಮಗಳನ್ನು ಇವರು ಆಯೋಜಿಸುತ್ತಾರೆ.

# ಗಣೇಶ @ ಮುಂಬೈ

ಸಂಖ್ಯೆ ಇಳಿಸಿ, 'ಪರಿಸರ ಸ್ನೇಹಿ' ಪ್ರತಿಮೆಗಳನ್ನು ಸ್ಥಾಪಿಸುವ ಕುರಿತ ಪ್ರಚಾರ ಜೋರಾಗಿ ನಡೆದಿದೆ.

ಮುಂಬೈಯ ಅನೇಕ ಗಣೇಶೋತ್ಸವ ಮಂಡಲಗಳು ವರ್ಷದುದ್ದಕ್ಕೂ ಜನಪರ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾ ಬಂದಿರುವುದು ವಿಶೇಷ. ಅವುಗಳಲ್ಲಿ 'ಲಾಲ್‌ಭಾಗ್ ಚಾ ರಾಜಾ' ಗಣೇಶೋತ್ಸವ ಮಂಡಲಿ ಮತ್ತು ಗಣೇಶಗಲ್ಲಿಯ ಮಂಡಳಿ ಪ್ರಮುಖವಾದದ್ದು. ಕಿಂಗ್‌ಸರ್ಕಲ್‌ನ ಜಿ.ಎಸ್.ಬಿ. ಮಂಡಲದ ಸಾರ್ವಜನಿಕ ಗಣೇಶೋತ್ಸವ, ವಡಾಲದ ಗಣೇಶೋತ್ಸವ, ಚೆಂಬೂರ್‌ನ ಸಹ್ಯಾದ್ರಿ ಕ್ರೀಡಾ ಮಂಡಳಿ (ತಿಲಕ್ ನಗರ)ಯ ಗಣೇಶೋತ್ಸವ, ಚಿಂಚ್‌ಪೋಕ್ಲಿಯ ಚಿಂತಾಮಣಿ ಗಣೇಶೋತ್ಸವ- ಹೀಗೆ ಹತ್ತಾರು ಮಂಡಲಗಳು ತಮ್ಮದೇ ಆದ ಆಕರ್ಷಣೆಗಳಿಂದ ಭಕ್ತರನ್ನು ಸೆಳೆಯುತ್ತವೆ. ಆ್ಯಂಬುಲೆನ್ಸ್ ಸೇವೆ, ಶೈಕ್ಷಣಿಕ ಸೇವೆ, ವೈದ್ಯಕೀಯ ಸೇವೆ ಮುಂತಾದವನ್ನು ಹಲವಾರು ಗಣೇಶ ಮಂಡಲಗಳು ವರ್ಷವಿಡೀ ಮಾಡುತ್ತಾ ಬಂದಿವೆ.

ಹಿಂದೆ ಗಣೇಶ ಮಂಡಲಗಳಲ್ಲಿ ಗಣೇಶೋತ್ಸವ ಸಂದರ್ಭದಲ್ಲಿ 'ಗ್ಯಾಂಗ್‌ವಾರ್' ಭೀತಿ ಕಂಡು ಬರುತ್ತಿತ್ತು. ಇತ್ತೀಚೆಗೆ ಭಯೋತ್ಪಾದಕರ, ಬಾಂಬ್ ಸ್ಫೋಟದ ಭೀತಿ ಶುರುವಾಗಿದೆ. ಹಾಗಾಗಿ ಪ್ರಮುಖ ಮಂಡಲಗಳು 'ಮೆಟಲ್ ಡಿಟೆಕ್ಟರ್'ಗಳನ್ನು ಅಳವಡಿಸುತ್ತಿವೆ. ಸಿಸಿ ಟಿವಿ ಕ್ಯಾಮೆರಾಗಳ ಅಳವಡಿಕೆ ಕಡ್ಡಾಯವಾಗಿದೆ. ಸ್ವಯಂ ಸೇವಕರಿಗೆ ತರಬೇತಿಯನ್ನೂ ನೀಡುತ್ತಾರೆ. ಅನಾಹುತಗಳಿಂದ ನಷ್ಟವನ್ನು ತಪ್ಪಿಸಲು ಪ್ರಮುಖ ಗಣೇಶೋತ್ಸವ ಮಂಡಲಗಳು ವಿಮೆಯನ್ನು ಮಾಡಿಸಿಕೊಳ್ಳುತ್ತಿವೆ.

ಬಾಲಿವುಡ್‌ಗೂ ಗಣೇಶನಿಗೂ ಅವಿನಾಭಾವ ನಂಟು. ಗಣೇಶನ ಹಬ್ಬದಲ್ಲಿ ಹಲವು ಬಾಲಿವುಡ್ ಸ್ಟಾರ್‌ಗಳು ಉತ್ಸಾಹದಿಂದ ತೊಡಗಿಕೊಳ್ಳುತ್ತಾರೆ. ಹಿರಿಯ ನಟ ನಾನಾ ಪಾಟೇಕರ್ ಗಣೇಶನ ಬಹು ದೊಡ್ಡ ಭಕ್ತ. ಪ್ರತೀ ವರ್ಷ ತಮ್ಮ ಮನೆಯಲ್ಲಿ ಗಣೇಶನ ಮೂರ್ತಿ ಇರಿಸಿ ಪೂಜಿಸುತ್ತಾರೆ. ಊರ್ಮಿಳಾ, ರಾಖೀ ಸಾವಂತ್ ಮನೆಯ ಗಣೇಶೋತ್ಸವವೂ ಪ್ರಸಿದ್ಧಿ ಪಡೆದಿದೆ. ಸಲ್ಮಾನ್ ಖಾನ್ ಕೂಡಾ ಗಣೇಶನ ದೊಡ್ಡ ಭಕ್ತ. ರಾಣಿ ಮುಖರ್ಜಿ, ಜಿತೇಂದ್ರ- ಹೀಗೆ ಬಾಲಿವುಡ್ 'ಗಣೇಶ ಭಕ್ತ'ರ ಪಟ್ಟಿ ಉದ್ದವಿದೆ. ಹಿಂದೆ ದಿ. ರಾಜ್ ಕಪೂರ್ ಅವರೂ ಗಣೇಶ ಪ್ರತಿಮೆ ಇರಿಸಿ ಸುದ್ದಿ ಮಾಡಿದ್ದರು. ಬಹುತೇಕ ತಾರೆಯರು ತಮ್ಮ ಮನೆಗಳಲ್ಲಿ ಒಂದೂವರೆ ದಿನ ಮಾತ್ರ ಗಣೇಶ ಪ್ರತಿಮೆ ಇರಿಸಿ ಪೂಜೆ ಮಾಡಿ ವಿಸರ್ಜಿಸುತ್ತಾರೆ.

### ಪೇಣ್ ಶಹರದಲ್ಲಿ..

ಮೂರ್ತಿ ತಯಾರಿಸುವುದರಲ್ಲಿ ಮಹಾರಾಷ್ಟ್ರದ ಪೇಣ್ ಶಹರ ಪ್ರಸಿದ್ಧ. ಇಲ್ಲಿಂದ ಈ ವರ್ಷ 30 ಸಾವಿರಕ್ಕೂ ಹೆಚ್ಚು ಮೂರ್ತಿಗಳು ವಿಮಾನದ ಮೂಲಕ ವಿದೇಶಗಳಿಗೆ ಪಯಣಿಸಿವೆ. ಇನ್ನೂ 20 ಸಾವಿರ ಮೂರ್ತಿಗಳನ್ನು ಕಳುಹಿಸುವ ಗುರಿ ಇದೆಯಂತೆ! ಪೇಣ್ ಸಹಿತ, ಮಹಾರಾಷ್ಟ್ರದ ರಾಯ್‌ಗಢ್ ಜಿಲ್ಲೆಯಲ್ಲಿ ಗಣೇಶಮೂರ್ತಿ ಉದ್ಯೋಗದ ವಹಿವಾಟು ಮೌಲ್ಯ ಪ್ರತಿ ವರ್ಷ 20 ಕೋಟಿ ರೂಪಾಯಿಯನ್ನೂ ದಾಟುತ್ತದೆ.

ಪೇಣ್ ಶಹರದಲ್ಲಿ 1890ರಿಂದಲೇ ಗಣೇಶಮೂರ್ತಿ ತಯಾರಿಸುವ ಕೆಲಸ ಆರಂಭವಾಗಿದೆ. ಈ 124 ವರ್ಷಗಳಲ್ಲಿ ಪೇಣ್ ಮತ್ತು ಸುತ್ತಲಿನ ಊರುಗಳಲ್ಲಿ ಗಣೇಶ ಮೂರ್ತಿ ತಯಾರಿಸುವ 1,500ಕ್ಕೂ ಅಧಿಕ ಕಾರ್ಖಾನೆಗಳಿವೆ. ಇಲ್ಲಿನ ಮೂರ್ತಿಗಳು ಅತ್ಯಂತ ಸುಂದರವೆಂದೇ ಖ್ಯಾತಿ ಹೊಂದಿವೆ. ಇಲ್ಲಿ ವರ್ಷವಿಡೀ ಗಣೇಶನ ಮೂರ್ತಿಗಳ ನಿರ್ಮಾಣ ಕಾರ್ಯ ನಡೆಯುತ್ತದೆ. ಪ್ರತಿ ವರ್ಷ ಗಣೇಶನ ಮೂರ್ತಿಗಳ ಸಂಖ್ಯೆ ಹದಿನೈದು ಲಕ್ಷವನ್ನು ದಾಟುತ್ತವೆ. ರಾಯ್‌ಗಢ್ ಜಿಲ್ಲೆಯಲ್ಲಿ ಒಟ್ಟು ಸುಮಾರು 45 ಲಕ್ಷದಷ್ಟು ಮೂರ್ತಿಗಳನ್ನು ತಯಾರಿಸುತ್ತಾರೆ.

ಜುಹು ಚೌಪಾಟಿ, ದಾದರ್, ಶಿವಾಜಿಪಾರ್ಕ್, ಗಿರ್‌ಗಾಂವ್ ಚೌಪಾಟಿ ಇಲ್ಲೆಲ್ಲ ವಿಸರ್ಜನೆ ಸಮಯದಲ್ಲಿ ಗಣೇಶ ಪ್ರತಿಮೆಗಳನ್ನು ನೀರಿನ ತನಕ ಒಯ್ದು ಮುಳುಗಿಸಲು ಹಿರಿಯರಿಗೆ ಕಷ್ಟವಾದರೆ ನೆರವು ನೀಡಲೆಂದೇ ಸಮುದ್ರ ತೀರದಲ್ಲಿ ಜನರು ಸಿಗುತ್ತಾರೆ. ಅವರಿಗೆ ಕೇಳಿದಷ್ಟು ಹಣ ನೀಡಿದರೆ ಪೂಜೆಯ ನಂತರ ಪ್ರತಿಮೆಯನ್ನು ನೀರಲ್ಲಿ ವಿಸರ್ಜಿಸಿ ಬರುತ್ತಾರೆ. ವಿಶೇಷವೆಂದರೆ ಈ ರೀತಿಯ ವಿಸರ್ಜನೆ ನಡೆಸುವವರಲ್ಲಿ ಮುಸ್ಲಿಂ ಧರ್ಮೀಯರೂ ಇರುತ್ತಾರೆ!

ಮುಂಬೈ ಗಣೇಶೋತ್ಸವದಲ್ಲಿ ಜನಜಾಗೃತಿಯ ಅನೇಕ ಕೆಲಸಗಳೂ ನಡೆಯುತ್ತವೆ. ಪ್ಲಾಸ್ಟಿಕ್ ಬಳಕೆಗೆ ತಡೆ, ಕನ್ಯಾ ಸಂತತಿಗೆ ಪ್ರೋತ್ಸಾಹ, ಸಾಕ್ಷರತೆ ವೃದ್ಧಿ, ಗುಟ್ಕಾ- ತಂಬಾಕು ನಿಷೇಧ ಮುಂತಾದ ಸಂದೇಶಗಳನ್ನೂ ಸಾರಲು ಈ ಉತ್ಸವದ ಬಳಕೆಯಾಗುತ್ತವೆ.